# ವಿಭೂತಿಪೂಜೆ

ವಿಭೂತಿ ಎಂಬ ಮಾತಿಗೆ ಎರಡು ನೆಲೆಗಳುಂಟು. ಮೊದಲನೆಯದು ತಾತ್ತ್ವಿಕ, ಎರಡನೆಯದು ಧಾರ್ಮಿಕ. ತಾತ್ತ್ವಿಕ ನೆಲೆಯು ಪ್ರಥಮ ಸೋಪಾನವಾದರೆ; ಧಾರ್ಮಿಕ ನೆಲೆಯು ಅಂತಿಮ ಸೋಪಾನ. ಇವೆರಡಕ್ಕೂ ಅನ್ಯೋನ್ಯಾಶ್ರಯಗಳುಂಟು. ತಾತ್ತ್ವಿಕ ನೆಲೆಯಲ್ಲಿ 'ವಿಭೂತಿ'ಗೆ ಮಹತ್ತ್ವದ ಸ್ಥಾನವಿದೆ. 'ಭೂತಿ' ಎಂದರೆ ಆಗುವಿಕೆ ಎಂದು ಅರ್ಥ. 'ವಿ' ಎಂಬುದಕ್ಕೆ ವಿಶೇಷವಾಗಿ ಎಂದು ಅರ್ಥ. 'ವಿಭೂತಿ ಪುರುಷ' ಎಂದರೆ, ಜಗಚ್ಚೈತನ್ಯದ ಒಂದು ಅಂಶದ ಅವತರಣ ಎಂದು ಅರ್ಥ. ಶ್ರೀರಮಣ, ಸ್ವಾಮಿ ವಿವೇಕಾನಂದ, ಸಿದ್ಧಾರೂಢ ಮುಂತಾದವರೆಲ್ಲರೂ ವಿಭೂತಿ ಪುರುಷರೇ. ಅವರು ಸಾಮಾಜಿಕ ಜೀವನದಲ್ಲಿ ನೈತಿಕತೆ, ಆಧ್ಯಾತ್ಮಿಕತೆಯ ಉಜ್ಜೀವನಕ್ಕಾಗಿ ಶ್ರಮಿಸಿದವರೆಂಬುದು ನಿಶ್ಚಿತ. ಗಾಂಧೀಜಿ–ಅಂಬೇಡ್ಕರ್ ಕೂಡ 'ವಿಭೂತಿ' ಪುರುಷರೇ. ಇದು ತಾತ್ತ್ವಿಕ ಮಟ್ಟದಲ್ಲಿ ಚಿಂತಿಸಬೇಕಾದ ಪರಿ.

ವಿಭೂತಿಯನ್ನು ಧಾರ್ಮಿಕ ನೆಲೆಯಲ್ಲಿ ಸ್ವಲ್ಪ ಚಿಂತಿಸಬಹುದು. ಹಸುಗಳ ಗೋಮಯದಿಂದ ವಿಭೂತಿಗಳನ್ನು ತಯಾರಿಸುತ್ತಾರೆಂಬುದು ತಿಳಿದ ಸಂಗತಿಯೇ. ಅಂಥ ಹಸುಗಳಲ್ಲಿಯೂ ಐದು ತೆರನಾದ ಗೋವುಗಳುಂಟು. ಕಪಿಲ, ಕೃಷ್ಣ, ರಕ್ತ, ಶ್ವೇತ ಮತ್ತು ಚಿತ್ರವರ್ಣಗಳ ಗೋವುಗಳು ಹಾಕುವ ಸಗಣಿಯನ್ನು ಪಂಚಬ್ರಹ್ಮ ಮಂತ್ರಗಳನ್ನು ಹೇಳುತ್ತ ಎತ್ತಿಕೊಳ್ಳಬೇಕು. ಅದನ್ನು ಉಂಡೆಮಾಡಿ ಒಣಗಿಸಬೇಕು. ಅನಂತರ ಸುಟ್ಟು ಶೋಧಿಸಬೇಕು. ವಿವಿಧ ವರ್ಣಗಳಿಂದ ಬಂದಂಥ ಸಗಣಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿಯೇ ಸುಟ್ಟು ಇಟ್ಟುಕೊಳ್ಳುವುದು ಅವಶ್ಯ. ಮೊದಲನೆಯದಾದ ಕಪಿಲವರ್ಣದ ಬೂದಿಯನ್ನು 'ವಿಭೂತಿ' ಎಂದು ಕರೆದರು. ಕೃಷ್ಣವರ್ಣದ ಬೂದಿಯನ್ನು 'ಭಸಿತ' ಎಂದು ಕರೆಯುವುದುಂಟು. ರಕ್ತವರ್ಣದ ಬೂದಿಯನ್ನು 'ಭಸ್ಮ' ಎಂದು ಕರೆದರೆ; ಶ್ವೇತವರ್ಣದ ಬೂದಿಯನ್ನು 'ಕ್ಷಾರ'ವೆಂದು ಕರೆಯುತ್ತಾರೆ. ಕೊನೆಯದಾದ ಚಿತ್ರವರ್ಣದ ಬೂದಿಯನ್ನು 'ರಕ್ಷೆ' ಎನ್ನುವುದುಂಟು. ಸಾಮಾನ್ಯವಾಗಿ ಈ ಐದು ಬಗೆಯನ್ನು 'ವಿಭೂತಿ' ಎಂದೇ ಕರೆಯುತ್ತಾರೆ. ಮೇಲಿನ ಐದು ಬಗೆಯ ವಿಭೂತಿಗಳು ಕ್ರಮವಾಗಿ ಐಶ್ವರ್ಯ, ಸರ್ವಭಾಸಕತ್ವ, ಸರ್ವಪಾಪದಹನ, ಸರ್ವಪಾಪ ಕ್ಷಾಲನ, ಸರ್ವಭೂತೋಚ್ಚಾಟನೆಯನ್ನು ಪ್ರತಿನಿಧಿಸುತ್ತವೆ. ಇಷ್ಟು ಮಾತ್ರವಲ್ಲ – ವಿಭೂತಿ, ಭಸಿತ, ಭಸ್ಮ, ಕ್ಷಾರ, ರಕ್ಷೆ ಇವು ಕ್ರಮವಾಗಿ ನಿತ್ಯಕರ್ಮ, ನೈಮಿತ್ತಿಕ ಕರ್ಮ, ಕಾಮ್ಯಕರ್ಮ, ಪ್ರಾಯಶ್ಚಿತ್ತ ಮತ್ತು ಮುಕ್ತಿ ಕ್ರಿಯೆಗಳಿಗೆ ಪ್ರಶಸ್ತವಾದುವು ಎಂಬ ಗಾಢವಾದ ನಂಬುಗೆ ಧಾರ್ಮಿಕನೆಲೆಯಲ್ಲಿ ಉಂಟು.

ವಿಭೂತಿಯನ್ನು ವಿಶೇಷ ವಿಧಾನದಿಂದಲೂ ಉತ್ಪಾದಿಸುವುದುಂಟು. ಅವುಗಳನ್ನು ನಾಲ್ಕಾಗಿ ಅರಿತವರು ವಿಂಗಡಿಸುತ್ತಾರೆ. ಕಲ್ಪ, ಅನುಕಲ್ಪ, ಉಪಕಲ್ಪ, ಅಕಲ್ಪ ಎಂಬುದೇ ಆ ನಾಲ್ಕು ಬಗೆ. ಮೇಲೆ ಹೇಳಿದ ರೀತಿಯಲ್ಲಿ ಮಾಡಿದ ವಿಭೂತಿಯನ್ನು 'ಕಲ್ಪ' ಎಂದಾದರೆ; ಕಾಡಿನಲ್ಲಿ ಬಿದ್ದು ಒಣಗಿರುವ ಗೋಮಯವನ್ನು ತಂದು ಸಣ್ಣ ಸಣ್ಣದಾಗಿ ಪುಡಿಮಾಡಿ, ಸುಟ್ಟು ಸೋಸಿದರೆ ಅದು 'ಅನುಕಲ್ಪ'. ಹೀಗೆ ಸುಟ್ಟದ್ದನ್ನು ವಸ್ತ್ರದಿಂದ ಸೋಸಿ ಗಂಜಲದಲ್ಲಿ ಕಲಸಿ ಉಂಡೆ ಮಾಡಿ ಮತ್ತೆ ಸುಟ್ಟು, ಮತ್ತೆ ಸೋಸಿದರೆ ಅದು 'ಉಪಕಲ್ಪ'. ಇವು ಮೂರನ್ನು ವಿಭೂತಿಧಾರಣೆ ಮಾಡಿಕೊಳ್ಳುವವನೇ ಸ್ವತಃ ಮಾಡಿಕೊಳ್ಳಬೇಕು. ಇದೇ ಕ್ರಮವನ್ನು ಅನುಸರಿಸಿ ಬೇರೆಯವರಿಂದ ಮಾಡಿಸಿದರೆ 'ಅಕಲ್ಪ' ಎಂದು ಕರೆಯುವುದುಂಟು. ಹೀಗೆ ಉತ್ಪಾದಿಸಿದ ವಿಭೂತಿಗಳಲ್ಲಿ ಯತಿ, ಸಾಧು, ಯೋಗಿ ಮುಂತಾದವರು ಯಾವುದನ್ನಾದರೂ ಬಳಸಬಹುದು. ಇವುಗಳನ್ನು ಮನೆಗಳಲ್ಲೊ ದೇವಸ್ಥಾನಗಳಲ್ಲೊ ಧಾರಣೆ ಮಾಡಿಕೊಳ್ಳಲು ಹಿಂದಿನಕಾಲದಲ್ಲಿ ಇಡುತ್ತಿದ್ದದ್ದುಂಟು!

ವಿಭೂತಿಯನ್ನು ತಯಾರಿಸಿದ ಮೇಲೆ ಅವುಗಳನ್ನು ಬಳಸುವಲ್ಲಿಯೂ ಮೂರು ಬಗೆಯ ವಿಧಾನಗಳಿವೆ. ಮೊದಲನೆಯದು 'ವಿಭೂತಿಸ್ನಾನ, ಎರಡನೆಯದು 'ವಿಭೂತಿ ಉದ್ಧೂಳನ', ಮೂರನೆಯದು 'ವಿಭೂತಿಧಾರಣ.' ಮೊದಲು ವಿಭೂತಿಸ್ನಾನದ ವಿಧಾನವನ್ನು ತಿಳಿಯೋಣ. ಕೈಕಾಲು ತೊಳೆದು ಸ್ವಸ್ತಿಕಾಸನದಲ್ಲಿ ಕುಳಿತುಕೊಳ್ಳಬೇಕು. ಅನಂತರ ಪ್ರಾಣಾಯಾಮ ಮಾಡಿ ಭಸ್ಮಸ್ನಾನ ಮಾಡುತ್ತಿದ್ದೇನೆಂದು ಆತ ಸಂಕಲ್ಪಿಸಿಕೊಳ್ಳಬೇಕು. ಆಯಾಯ ನಿರ್ದಿಷ್ಟ ಮಂತ್ರಗಳನ್ನು ಹೇಳಿಕೊಳ್ಳುತ್ತ ಶಿರಸ್ಸು, ಮುಖ, ಹೃದಯ, ಗುಹ್ಯ, ಸರ್ವಾಂಗವೆಂಬ ಐದು ಸ್ಥಾನಗಳಲ್ಲಿ ಸಂಪ್ರೋಕ್ಷಣೆ ಮಾಡಿಕೊಳ್ಳುವುದನ್ನು 'ವಿಭೂತಿಸ್ನಾನ' ಎನ್ನುತ್ತಾರೆ. ಈಗ 'ವಿಭೂತಿ ಉದ್ಧೂಳನ'ದ ಬಗೆಗೆ ತಿಳಿಯೋಣ. ಇಲ್ಲಿ ನಿರ್ದಿಷ್ಟ ಮಂತ್ರೋಚ್ಚಾರ ಮಾಡುತ್ತ ಶಿರಸ್ಸು, ಮುಖ, ಹೃದಯ, ಗುಹ್ಯ ಸರ್ವಾಂಗಗಳಿಗೂ ಕ್ರಮವಾಗಿ ಐದು ಬಾರಿ, ನಾಲ್ಕು ಬಾರಿ, ಎಂಟು ಬಾರಿ, ಹದಿಮೂರು ಬಾರಿ ಮತ್ತು ಒಂದು ಬಾರಿ ವಿಭೂತಿಯ ಧೂಳನ್ನು ಬಳಿದುಕೊಳ್ಳುವುದೇ ವಿಭೂತಿ ಉದ್ಧೂಳನ. ಇನ್ನು ಮೂರನೆಯದಾದ ವಿಭೂತಿಧಾರಣವನ್ನು ಸುಶೀತಳ ಮಂತ್ರೋದಕ ಮಿಶ್ರಿತವಾಗಿ, ತ್ರಿಪುಂಡ್ರವಾಗಿ, ಮೂಲಮಂತ್ರಗಳನ್ನು ಹೇಳಿಕೊಳ್ಳುತ್ತ, ಶಿವನ ಮೂರ್ತಿಯನ್ನು ಧ್ಯಾನಿಸುತ್ತ ದೇಹದ ಮೂವತ್ತೆರಡು ಸ್ಥಾನಗಳಲ್ಲಿ ಧರಿಸುವುದನ್ನು 'ವಿಭೂತಿಧಾರಣ' ಎಂದು ಕರೆಯುತ್ತಾರೆ!

ವಿಭೂತಿಧಾರಣೆಗೂ ಕೆಲವು ನಿಯಮಗಳುಂಟು. ವಿಭೂತಿಧಾರಣೆ ಮಾಡಿಕೊಳ್ಳುವಾಗ ಬಲಗೈಯ ಮಧ್ಯಮ, ಅನಾಮಿಕ, ಅಂಗುಷ್ಠ ಬೆರಳುಗಳನ್ನು ಮಾತ್ರ ಬಳಸಬೇಕು. ಅಥವ ಮಧ್ಯದ ಮೂರು ಬೆರಳುಗಳನ್ನು ಬಳಸಿ ಹಚ್ಚಿಕೊಳ್ಳಬಹುದು. 'ಓಂ' ಎಂಬ ಪ್ರಣವ ಮಂತ್ರವು ಅ, ಉ, ಮ ಎಂಬ ಅಕ್ಷರಗಳ ಸಮಷ್ಟಿ ಮಂತ್ರಾತ್ಮಕವಾದದ್ದಲ್ಲವೆ? ಅಕಾರವೇ ಅನಾಮಿಕೆ, ಉಕಾರವೇ ಮಧ್ಯಮೆ, ಮಕಾರವೇ ತರ್ಜನಿ ಎಂದರಿತು ಎಡದಿಂದ ಬಲಕ್ಕೆ ಮೂರೆಳೆಯಾಗಿ ವಿಭೂತಿಯನ್ನು ಹಚ್ಚಿಕೊಳ್ಳಬೇಕು. ಹೀಗೆ ಮೂರು ಎಳೆಗಳು ಅಗ್ನಿತ್ರಯ, ಅಕ್ಷರತ್ರಯ, ಗುಣತ್ರಯ, ಲೋಕತ್ರಯ, ಆತ್ಮತ್ರಯ, ವೇದತ್ರಯ, ಕಾಲತ್ರಯ, ರುದ್ರ ಈಶ್ವರಸದಾಶಿವರೆಂಬ ದೇವತಾತ್ಮಕತ್ರಯಕ್ಕೆ ಸಂಕೇತವೆಂದು ನಾವು ತಿಳಿಯಬೇಕು.

ಪ್ರಾಚೀನರು ವಿಭೂತಿಯನ್ನು ಸ್ವತಃ ತಯಾರಿಸಿಕೊಳ್ಳುತ್ತಿದ್ದರು. ಅವುಗಳನ್ನು ಸಶಾಸ್ತ್ರೀಯ ವಿಧಾನದಿಂದ ಧಾರಣೆ ಮಾಡಿಕೊಳ್ಳುತ್ತಿದ್ದರು. ಈಗಲೂ ಶೈವ–ವೀರಶೈವ ಮುಂತಾದವರು ಸಕ್ರಮ ರೀತಿಯಿಂದ ವಿಭೂತಿಯನ್ನು ಉತ್ಪಾದಿಸಿ ಮಂತ್ರೋಕ್ತವಾಗಿ ಧರಿಸಿಕೊಳ್ಳುತ್ತಾರೆ. ಚರ್ಮವ್ಯಾಧಿಗಳಿಗೂ ಭಸ್ಮಧಾರಣೆ ಬಲು ಉಪಯುಕ್ತ. ವಿಭೂತಿಯನ್ನು ನೀರಲ್ಲಿ ಕಲಸಿ ನಿರ್ದಿಷ್ಟ ಕ್ರಮದಲ್ಲಿ ಸೇವಿಸಿದಾಗ ಕೆಲವು ದೈಹಿಕರೋಗಗಳು ಗುಣವಾಗುವುದುಂಟು. ದೇಹದ ನಿರ್ಮಲೀಕರಣಕ್ಕೂ ಮನೋದಾರ್ಢ್ಯಕ್ಕೂ ವಿಭೂತಿಧಾರಣೆ ಅವಶ್ಯವೆಂದು ಪ್ರಾಚೀನರು ಬಳಸಿ ತಿಳಿದಿದ್ದರು! ವಿಭೂತಿಧಾರಣೆಯು ಯಾಂತ್ರಿಕವೊ ಸಾಂಪ್ರದಾಯಿಕವೊ ಎಂದು ನಾವು ಸಂಶಯಪಡಬೇಕಿಲ್ಲ. ಅದು ಲೌಕಿಕವಾಗಿಯೂ ಉಪಯುಕ್ತ; ಪಾರಲೌಕಿಕವಾಗಿಯೂ ಅನುಕೂಲವೆಂದು ನಾವು ಭಾವಿಸಬೇಕು! 'ಯಥಾ ದೃಷ್ಟಿಃ ತಥಾ ಸೃಷ್ಟಿಃ' ಎಂದಲ್ಲವೆ ಉಪನಿಷತ್ತು ಸಾರುವುದು!

■ **ಪುರಂಜೀವಿ**

## ಮಾತೇ ಮುತ್ತು

- ಮಾತಿಗಿಂತ ಜೀವನವನ್ನೇ ನಮ್ಮ ವಿಷಯವಾಗಿ ಮಾತನಾಡಲು ಬಿಡುವುದು ಉತ್ತಮ.

  —ಗಾಂಧೀಜಿ

- ಜನರಿಗೆ ತಮ್ಮ ಹಕ್ಕು, ಹೊಣೆಗಾರಿಕೆಯ ಅರಿವು ಇಲ್ಲದೆ ಹೋದರೆ ಪ್ರಜಾಪ್ರಭುತ್ವ ಕೇವಲ ನಕಲಿ ಮಾಲು.

  —ಎಂ. ಗೋಪಾಲಕೃಷ್ಣ ಅಡಿಗ

- ನಮ್ಮ ಬಳಿ ಸಾಧ್ಯ ಇಲ್ಲ ಎನ್ನುವುದು ಯಾವುದೂ ಇಲ್ಲ, ಮನಸ್ಸು ಅಂಜುತ್ತದೆ ಅಷ್ಟೇ. ಧೈರ್ಯಮಾಡಿ ಮುಂದೆ ಸಾಗಿ ಗೆದ್ದರೆ ಇನ್ನೊಬ್ಬರಿಗೆ ಪಾಠ ಹೇಳಿಕೊಡಬಹುದು. ಸೋತರೆ ನಾವೇ ಪಾಠ ಕಲಿಯಬಹುದು.

  —ಗೌತಮ ಬುದ್ಧ

- ಪುಸ್ತಕಗಳಲ್ಲಿ ಹಳೆಯವೆಂಬುವೇ ಇಲ್ಲ. ಓದಿರದ ಪುಸ್ತಕಗಳೆಲ್ಲ ಹೊಸವು; ಮತ್ತೆ ಮತ್ತೆ ಓದಬೇಕೆನ್ನುವ ಪುಸ್ತಕಗಳೆಲ್ಲ ಹೊಸವು.

  —ಹಾ.ಮಾ. ನಾಯಕ

- ಮತವೆಂದರೆ ದೇವರನ್ನು ಕುರಿತ ನಂಬಿಕೆ ಮತ್ತು ಆ ನಂಬಿಕೆಗೆ ಅನುಸಾರವಾದ ನಡವಳಿಕೆ.

  —ಡಿ.ವಿ.ಜಿ.